

ಬಿಸಿಲು
ಬೆಳದಿಂಗಳು

ಡಾ. ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ
swamiji@taralabalu.org

# ಎಂದೂ ತುಂಬದ 'ಮದಗದ' ಕೆರೆ....

ಅಮೇರಿಕಾದೇಶವಾಸಿಯೊಬ್ಬ ಅಲ್ಲಿನ ಪತ್ರಿಕೆಗಳಲ್ಲಿ ಒಂದು ಆಕರ್ಷಕವಾದ ಜಾಹೀರಾತನ್ನು ಕೊಟ್ಟಿದ್ದ. "Dear Readers! Do you want to become a millionaire? Just send me a dollar. I will let you know the secret." (ಪ್ರಿಯ ಓದುಗರೇ! ನಿಮಗೆ ಕೋಟ್ಯಧಿಪತಿಯಾಗಬೇಕೆಂಬ ಆಸೆ ಇದೆಯೇ? ನನ್ನ ಹತ್ತಿರ ಒಂದು ರಹಸ್ಯ ಇದೆ. ನೀವು ಒಂದೇ ಒಂದು ಡಾಲರನ್ನು ಕಳುಹಿಸಿದರೆ, ಆ ರಹಸ್ಯವನ್ನು ನಾನು ನಿಮಗೆ ತಿಳಿಸುತ್ತೇನೆ). ಇದರಿಂದ ಆಕರ್ಷಿತರಾದ ಓದುಗರೆಲ್ಲರೂ ಎಲ್ಲರಿಗಿಂತ ಮೊದಲು ತಾನು ಕೋಟ್ಯಧೀಶನಾಗಬೇಕೆಂದು ತಡಮಾಡದೆ ಒಂದೊಂದು ಡಾಲರನ್ನು ಕಳುಹಿಸಿದರು. ಕೆಲವು ದಿನಗಳ ನಂತರ, ಹಣ ಕಳುಹಿಸಿದವರೆಲ್ಲರಿಗೂ ಆ ವ್ಯಕ್ತಿಯಿಂದ ಒಂದು ಕಾಗದ ಬಂದಿತು: "Dear Reader! Thank you for sending the money so promptly. I am glad that you want to become a millionaire. It is very simple. You just do as I did!" (ಪ್ರಿಯ ಓದುಗರೇ! ಹಣ ಕಳುಹಿಸಿದ್ದಕ್ಕೆ ಧನ್ಯವಾದಗಳು. ನೀವು ಕೋಟ್ಯಧಿಪತಿಯಾಗಲು ಬಯಸಿದ್ದೀರೆಂದು ತಿಳಿದು ಸಂತೋಷವಾಯಿತು. ಅದೇನೂ ಕಷ್ಟವಲ್ಲ. ನಾನು ಮಾಡಿದಂತೆ ನೀವು ಮಾಡಿರಿ!) ಓದುಗರು ಬೇಸ್ತು ಬಿದ್ದಿದ್ದರು. ಜಾಹೀರಾತು ಕೊಟ್ಟ ವ್ಯಕ್ತಿ ಮಾತ್ರ ಕೆಲವೇ ದಿನಗಳಲ್ಲಿ ಕರೋಡಪತಿಯಾಗಿದ್ದ.

'ಹಣವೆಂದರೆ ಹೆಣವೂ ಬಾಯ್ತೆರೆಯುತ್ತದೆ' ಎಂಬ ನಾಣ್ನುಡಿಯೇ ಇದೆ. 'ಎಲೆ ಎಲೆ ಮಾನವಾ, ಅಳಿಯಾಸೆ ಬೇಡವೋ! ಕಾಳಬೆಳದಿಂಗಳು ಸಿರಿ ಸ್ಥಿರವಲ್ಲ', 'ಕಣ್ಣಿನಲಿ ನೋಡಿ, ಮಣ್ಣಿನಲಿ ನೆರಹಿ (ಹೂತಿಟ್ಟು), ಉಣ್ಣದೇ ಹೋಗದಿರಾ!' ಎಂದು ಎಚ್ಚರಿಸುತ್ತಾರೆ ಬಸವಣ್ಣನವರು. ತುಂಬಿದ ಕೆರೆಯು ಒಡೆಯದಿರಲೆಂದು ಪ್ರತಿಯೊಂದು ಕೆರೆಗೂ ಒಂದು ಕೋಡಿಯನ್ನು ಇಟ್ಟಿರುತ್ತಾರೆ. ಹೆಚ್ಚಾದ ನೀರು ಕೋಡಿ ಬೀಳುತ್ತದೆ. ಹಾಗೆಯೇ ಶ್ರೀಮಂತರು ತಮ್ಮ ಸಂಪಾದನೆಯ ಹೆಚ್ಚುವರಿ ಭಾಗವನ್ನು ಕೋಡಿಯ ನೀರಿನಂತೆ ದಾನ-ಧರ್ಮದ ರೂಪದಲ್ಲಿ ನೀಡಬೇಕೆಂದು ಕೆಲವರು ಉಪದೇಶ ಮಾಡುತ್ತಾರೆ. ಇದು ಶುದ್ಧಾಂಗ ತಪ್ಪು. ಏಕೆಂದರೆ ಯಾವುದೇ ಕೆರೆಯಲ್ಲಿ ನೀರು ನಿಲ್ಲುವ ಒಂದು ಗರಿಷ್ಠ ಮಿತಿ ಇರುತ್ತದೆ. ಇಂತಿಷ್ಟೇ ಘನ ಅಡಿ ನೀರು ನಿಲ್ಲುತ್ತದೆಯೆಂಬ ಒಂದು ಕರಾರುವಕ್ಕಾದ ಲೆಕ್ಕಾಚಾರವಿರುತ್ತದೆ. ಅದಕ್ಕನುಗುಣವಾಗಿ ಕೆರೆಯಲ್ಲಿ ನೀರು ತುಂಬಿದ ಮೇಲೆ ಕೋಡಿ ಬೀಳಲೇಬೇಕು. ಅದನ್ನು ತಡೆಗಟ್ಟಲು ಸಾಧ್ಯವಿಲ್ಲ. ಇಲ್ಲದಿದ್ದರೆ ಕೆರೆ ಒಡೆದುಹೋಗುತ್ತದೆ. ಆದರೆ ಮನುಷ್ಯನ ಸ್ವಾರ್ಥವೆಂಬ ಕೆರೆಗೆ ಗರಿಷ್ಠ ಮಿತಿ ಎಂಬುದೇ ಇಲ್ಲ. ಅದಕ್ಕೆ ಉದ್ದ, ಅಗಲ, ಆಳಗಳಿಲ್ಲ! ದೇವರಂತೆಯೇ ಮನುಷ್ಯನ ಸ್ವಾರ್ಥವೂ ಸಹ ಜಗದಗಲ, ಮುಗಿಲಗಲ! ಸ್ವಾರ್ಥವೆಂಬ ಕೆರೆ ಎಂದೂ ತುಂಬಲು ಶಕ್ಯವಿಲ್ಲ. ಎಷ್ಟಿದ್ದರೂ ಸಾಲದು. ಇನ್ನೂ ಬೇಕು ಮತ್ತೂ ಬೇಕು ಎಂಬ ಬತ್ತದ ದಾಹ ! ಹೀಗಾಗಿ ಕೋಡಿ ಬೀಳುವ ಪ್ರಮೇಯವೇ ಇಲ್ಲಿ ಒದಗಿ ಬರುವುದಿಲ್ಲ.

ಟಾಲ್‌ಸ್ಟಾಯ್‌ನ ಕಥೆಯೊಂದು ಹೀಗಿದೆ: ರೈತನೊಬ್ಬನು ಓರ್ವ ರಾಜನನ್ನು ಪ್ರಾಣಾಪಾಯದಿಂದ ಪಾರು ಮಾಡಿದ. ಉಪಕಾರ ಸ್ಮರಣೆಯಿಂದ ಆ ರೈತನಿಗೆ ಏನನ್ನಾದರೂ ಕೊಡಬೇಕೆಂಬ ಮನಸ್ಸು ರಾಜನಿಗೆ ಉಂಟಾಯಿತು. ಆತನನ್ನು ತನ್ನ ಅರಮನೆಗೆ ಕರೆಸಿ ಸತ್ಕರಿಸಿ ನನ್ನ ರಾಜ್ಯದಲ್ಲಿ ನಿನಗೆ ಏನು ಬೇಕು ಕೇಳು, ಕೊಡುತ್ತೇನೆಂದು ರಾಜ ಹೇಳಿದ. ರೈತನಿಗೆ ಏನು ಕೇಳಬೇಕೆಂದು ತಿಳಿಯದಾಯಿತು. ತಮ್ಮ ಕೃಪೆ ಇದ್ದರಷ್ಟೇ ಸಾಕು ಎಂದ. ಆದರೆ ರಾಜ ಆ ಬಡ ರೈತನಿಗೆ ಏನನ್ನಾದರೂ ಕೊಡಬೇಕೆಂಬ ಉತ್ಕಟೇಚ್ಛೆಯಿಂದ "ನೀನು ಬೆಳಿಗ್ಗೆ 6 ಗಂಟೆಗೆ ಹೊರಟು ನಿನಗೆ ಬೇಕಾದಷ್ಟು ಜಮೀನನ್ನು ಸುತ್ತಾಡಿಕೊಂಡು ಸಂಜೆ 6 ಗಂಟೆಯೊಳಗೆ ಮರಳಿ ನೀನು ಹೊರಟ ಸ್ಥಳಕ್ಕೆ ಬಾ, ಅಷ್ಟು ಜಮೀನನ್ನು ನಿನಗೆ ಕೊಡುತ್ತೇನೆ" ಎಂದು ಹೇಳಿದ. ರೈತನಿಗೆ ತುಂಬಾ ಸಂತೋಷವಾಯಿತು. ಆಸೆ ಮೊಳಕೆಯೊಡೆಯಿತು. ರಾತ್ರಿಯೆಲ್ಲಾ ಚಿಂತಿಸಿದ. ನಡೆದುಕೊಂಡು ಹೋದರೆ ಕಡಿಮೆ ಜಮೀನು ಸಿಗುತ್ತದೆಯೆಂದು ಕುದುರೆಯ ಮೇಲೆ ಹೋಗಲು ನಿರ್ಧರಿಸಿದ. ಫಲವತ್ತಾದ ಕಡೆ ಜಮೀನನ್ನು ಮೊದಲೇ ನೋಡಿ ಬೆಳಿಗ್ಗೆ 6 ಗಂಟೆ ಹೊಡೆಯುತ್ತಲೇ ಕುದುರೆಯನ್ನೇರಿ ಹೊರಟ. ಸೂರ್ಯ ನೆತ್ತಿಯ ಮೇಲೆ ಬಂದರೂ ಪರಿವೆಯಿಲ್ಲದೆ, ಹಸಿವು

ನೀರಡಿಕೆಯೆನ್ನದೆ ಒಂದೇ ಸಮನೆ ಕುದುರೆಯನ್ನು ನಾಗಾಲೋಟದಿಂದ ಓಡಿಸಿದ. ಮಧ್ಯಾಹ್ನದ ಉರಿ ಬಿಸಿಲನ್ನು ಲೆಕ್ಕಿಸದೆ ಕುದುರೆಯನ್ನು ಮುಂದೆ ಮುಂದೆ ಓಡಿಸಿದ. ತಾನು ಹೊರಟ ಜಾಗವನ್ನು ಸಂಜೆಯೊಳಗೆ ಮತ್ತೆ ಮುಟ್ಟಬೇಕೆಂದು ರಾಜ ಹೇಳಿದ್ದು ತಟ್ಟನೆ ನೆನಪಾಯಿತು. ಕುದುರೆಯನ್ನು ಗರ್‍ರನೆ ಹಿಂದಕ್ಕೆ ತಿರುಗಿಸಿದ. ಆಗಲೇ ಬಹಳ ದೂರ ಬಂದಿದ್ದ. ಧಾವತಿಗೊಂಡು ಹೇಗಾದರೂ ಮಾಡಿ ಸಂಜೆ 6 ಗಂಟೆಯೊಳಗೆ ತಾನು ಹೊರಟ ಸ್ಥಳವನ್ನು ಮುಟ್ಟಬೇಕೆಂದು ಕುದುರೆಯನ್ನು ಇನ್ನೂ ಜೋರಾಗಿ ಓಡಿಸಿದ. ಚಾವಟಿ ಏಟು ಕೊಟ್ಟು ಮತ್ತೂ ಜೋರಾಗಿ ಓಡಿಸಿದ. ಬೆಳಗ್ಗೆ ಹೊರಟಿದ್ದ ಸ್ಥಳ ಇನ್ನೇನು ಸ್ವಲ್ಪ ದೂರದಲ್ಲಿಯೇ ಇತ್ತು. ಬೆಳಗಿನಿಂದ ಒಂದೇ ಸಮನೆ ಓಡಿದ್ದ ಕುದುರೆ ತುಂಬಾ ದಣಿದಿತ್ತು. ಆಕಸ್ಮಿಕವಾಗಿ ಕಲ್ಲೊಂದನ್ನು ಎಡವಿ ದೊಪ್ಪನೆ ಕೆಳಕ್ಕೆ ಬಿತ್ತು. ಹಸಿವು ಬಾಯಾರಿಕೆಗಳಿಂದ ಕಂಗಾಲಾಗಿ ಏದುಸಿರು ಬಿಡುತ್ತಿದ್ದ ರೈತನೂ ಸಹ ಕೆಳಗೆ ಕುಸಿದು ಬಿದ್ದ. ಪಕ್ಕದಲ್ಲಿದ್ದ ಕಲ್ಲುಬಂಡೆಗೆ ತಲೆ ಬಡಿದು ಸತ್ತು ಹೋದ. ಕೊನೆಯಲ್ಲಿ ಅವನಿಗೆ ಸಿಕ್ಕದ್ದು ಅವನ ಹೆಣವನ್ನು ಹೂಳಲು 6 x 3 ಅಡಿ ಉದ್ದಗಲದ 'ಜಮೀನು' ಮಾತ್ರ!

ದಾನವೆಂದರೆ ತನಗೆ ಬೇಕಾದಷ್ಟನ್ನು ಗಳಿಸಿದ ಮೇಲೆ ಉಳಿದ ಭಾಗವನ್ನು ಪರರಿಗೆ ನೀಡುವುದು ಎಂದರ್ಥವಲ್ಲ. ಇದ್ದುದರಲ್ಲಿಯೇ ಕಿಂಚಿತ್ತನ್ನು ಇನ್ನೊಬ್ಬರಿಗೆ ನೀಡುವ ಔದಾರ್ಯವೇ ದಾನ. ಮಹಾಭಾರತದ ಆಶ್ವಮೇಧಿಕ ಪರ್ವದಲ್ಲಿ ಒಂದು ಪ್ರಸಂಗ ಬರುತ್ತದೆ: ಬಡ ಕುಟುಂಬವೊಂದು ಹೊಲ ಗದ್ದೆಗಳಲ್ಲಿ ಬಿದ್ದ ಕಾಳುಗಳನ್ನು ಆಯ್ದುಕೊಂಡು ಬಂದು ಜೀವನ ನಿರ್ವಹಣೆ ಮಾಡುತ್ತಿತ್ತು. ಒಮ್ಮೆ ಭೀಕರ ಬರಗಾಲ ಬಂತು. ಬೆಳೆಯಿಲ್ಲದೆ ಎಲ್ಲಿಯೂ ಕಾಳು ಸಿಗದಂತಾಯಿತು. ಕುಟುಂಬದವರೆಲ್ಲರೂ ಸತತವಾಗಿ ಮೂರು ದಿನಗಳು ಬಹಳ ಕಡೆ ತಿರುಗಾಡಿ ಆರಿಸಿದಾಗ ಕೆಲವು ಹಿಡಿಯಷ್ಟು ಕಾಳುಗಳು ದೊರೆತವು. ಅದರಿಂದಲೇ ಅಡುಗೆ ಮಾಡಿ ಮರದ ಕೆಳಗೆ ಊಟಕ್ಕೆ ಕುಳಿತಾಗ ಹಸಿದ ಭಿಕ್ಷುಕನೊಬ್ಬ ಬಂದು ನಿಂತ. ಕುಟುಂಬದ ಯಜಮಾನನಿಗೆ ಉಣ್ಣಲು ಮನಸ್ಸು ಬರಲಿಲ್ಲ. ಅವನನ್ನು ಕರೆದು ಕುಳ್ಳಿರಿಸಿ ತನಗೆ ಬಡಿಸಿದ್ದ ಹಿಟ್ಟಿನ ಉಂಡೆಯನ್ನೇ ಆ ಭಿಕ್ಷುಕನಿಗೆ ನೀಡಿದ. ಅದರಿಂದ ಅವನ ಹೊಟ್ಟೆ ತುಂಬಲಿಲ್ಲ. ಕುಟುಂಬದ ಇತರ ಸದಸ್ಯರೂ ಒಬ್ಬೊಬ್ಬರಾಗಿ ತಮ್ಮ ತಮ್ಮ ಹಿಟ್ಟಿನ ಉಂಡೆಗಳನ್ನು ಅವನಿಗೆ ನೀಡಿ ಸಂತೃಪ್ತಿಪಡಿಸಿದರು. ಭಿಕ್ಷುಕನು ಉಂಡ ಮೇಲೆ ಬಿಲದಿಂದ ಮುಂಗಸಿಯೊಂದು ಹೊರಬಂತು. ಆ ಭಿಕ್ಷುಕ ಉಂಡ ಸ್ಥಳದಲ್ಲಿ ಹೊರಳಾಡಿತು. ಅವನ ಎಂಜಲಿನ ಕಣಗಳು ತಾಗಿ ಅದರ ಶರೀರದ ಒಂದು ಭಾಗವು ಬಂಗಾರವಾಯಿತು. ಉಳಿದರ್ಧ ಭಾಗವನ್ನು ಬಂಗಾರವನ್ನಾಗಿ ಮಾಡಿಕೊಳ್ಳಬೇಕೆಂಬ ಆಸೆ ಅದಕ್ಕೆ ಉಂಟಾಯಿತು. ಧರ್ಮರಾಯನು ಆಗ ತಾನೇ ಕುರುಕ್ಷೇತ್ರ ಯುದ್ಧದಲ್ಲಿ ಗೆದ್ದು ಅಶ್ವಮೇಧಯಾಗವನ್ನು ಮಾಡುತ್ತಿದ್ದ. ಆ ಸಂದರ್ಭದಲ್ಲಿ ಅನೇಕ ದಾನ-ಧರ್ಮ ಮಾಡುತ್ತಿದ್ದುದನ್ನು ಕೇಳಿದ ಆ ಮುಂಗಸಿಯು ಹಸ್ತಿನಾಪುರಕ್ಕೆ ಓಡಿತು. ಯಜ್ಞ ಶಾಲೆಯ ಆವರಣದಲ್ಲೆಲ್ಲಾ ಹೊರಳಾಡಿತು. ಎಷ್ಟು ಹೊರಳಾಡಿದರೂ ಅದರ ಇನ್ನೊಂದು ಭಾಗವು ಬಂಗಾರವಾಗಲಿಲ್ಲ. ಬಡಕುಟುಂಬದ ಹಿಟ್ಟಿನ ದಾನದ ಮುಂದೆ ನಿನ್ನ ಧನ-ಕನಕ-ಧಾನ್ಯಾದಿಗಳ ಮಹಾದಾನವು ಏನೂ ಅಲ್ಲವೆಂದು ನೀಲಾಕ್ಷ ಎಂಬ ಆ ಮುಂಗಸಿಯು ಧರ್ಮರಾಯನನ್ನು ಮೂದಲಿಸಿತು. ಈ ವೃತ್ತಾಂತದ ತಾತ್ಪರ್ಯವಿಷ್ಟು: ದಾನ ಮಾಡುವ ವ್ಯಕ್ತಿಗೆ ದಾನ ಪಡೆಯುವ ವ್ಯಕ್ತಿಯ ಬಗ್ಗೆ ಅಂತಃಕರಣವಿರಬೇಕು, ಮರುಕ ಇರಬೇಕು. ಆತನ ಕಷ್ಟದಲ್ಲಿ ನೆರವಾಗಬೇಕೆಂಬ ನೈಜ ಕಳಕಳಿ ಇರಬೇಕು. ಅಂತಹ ಶುದ್ಧಾಂತಃಕರಣದಿಂದ ಮಾಡಿದ ದಾನವು ಮಾತ್ರ ಸಾರ್ಥಕವೆನಿಸುತ್ತದೆ, ಆತ್ಮ ತೃಪ್ತಿಯನ್ನು ತಂದುಕೊಡುತ್ತದೆ. ಉಳಿದುದು ಅಹಂಕಾರಕ್ಕೆ ಎಡೆ ಮಾಡಿಕೊಡುತ್ತದೆ. ಕೀರ್ತಿ ಪ್ರತಿಷ್ಠೆಗಳಿಗಾಗಿ ಮಾಡುವ ದಾನವು ದಾನವಲ್ಲ ಎನ್ನುತ್ತಾರೆ ಬಸವಣ್ಣನವರು:

**ಮಾಡಿದೆನೆಂಬುದು ಮನದಲ್ಲಿ ಹೊಳೆದರೆ**
**ಏಡಿಸಿ ಕಾಡಿತ್ತು ಶಿವನ ಡಂಗುರ !**
**ಮಾಡಿದೆನೆನ್ನದಿರಾ ಲಿಂಗಕ್ಕೆ**
**ಮಾಡಿದೆನೆನ್ನದಿರಾ ಜಂಗಮಕ್ಕೆ**
**ಮಾಡಿದೆನೆಂಬುದು ಮನದಲ್ಲಿಲ್ಲದಿದ್ದರೆ**
**ಬೇಡಿತ್ತನೀವ ಕೂಡಲ ಸಂಗಮದೇವಾ !**

**ಬಲಿಯ ಭೂಮಿ, ಕರ್ಣನ ಕವಚ, ಖಚರನ ಅಸ್ಥಿ**
**ಶಿಬಿಯ ಮಾಂಸ ವೃಥಾ ಹೋಯಿತ್ತಲ್ಲ !**
**ಕೀರ್ತಿವಾರ್ತೆಗೆ ಮಾಡಿದವನ ಧನವು ವೃಥಾ ಹೋಯಿತ್ತಲ್ಲಾ !"**

ದಾನ ಮಾಡುವುದು ಒಂದು ಪುಣ್ಯ ಕಾರ್ಯವೇನೋ ನಿಜ. ಆದರೆ ಬಹಳ ಜನರಿಗೆ ದಾನ ಮಾಡುವಾಗ ಕಷ್ಟದಲ್ಲಿರುವ ವ್ಯಕ್ತಿಯ ಮೇಲಿನ ಅನುಕಂಪೆಗಿಂತ, ತಾನು ಮಾಡುವ ಪುಣ್ಯ ಕಾರ್ಯಗಳಿಂದ ತಮ್ಮ ಕಷ್ಟಗಳು ನಿವಾರಣೆಯಾಗುತ್ತವೆಯೆಂಬ ಸ್ವಾರ್ಥ ಭಾವನೆಯೇ ಹೆಚ್ಚು. ಇನ್ನು ಪುರಾಣಗಳು ಪುಣ್ಯ ಕಾರ್ಯ ಮಾಡುವವರಿಗೆ

ಸತ್ತ ಮೇಲೆ ಸ್ವರ್ಗ ಸುಖವು ದೊರೆಯುವುದೆಂಬ ಆಸೆಯನ್ನು ಹುಟ್ಟಿಸುತ್ತಲೇ ಬಂದಿವೆ. ಅದು 'ಇದರಿಂದ ನನಗೇನು ಲಾಭ' ಎಂದು ಲೆಕ್ಕಾಚಾರ ಹಾಕುವ ಜನರನ್ನು ಒಳ್ಳೆಯ ಕಾರ್ಯ ಮಾಡಲು ಪ್ರೇರೇಪಿಸುವ ಸದುದ್ದೇಶವೇ ಹೊರತು ಬೇರೇನೂ ಅಲ್ಲ.

ಕಠೋಪನಿಷತ್ತಿನ ಆರಂಭದಲ್ಲಿ ಒಂದು ರೋಚಕ ಪ್ರಸಂಗ ಹೀಗೆ ಬರುತ್ತದೆ: ವಾಜಶ್ರವಸ್ ಎಂಬ ಒಬ್ಬ ಮಹಾರಾಜ ಸ್ವರ್ಗಸುಖವನ್ನು ಬಯಸಿ ಒಂದು ಯಜ್ಞವನ್ನು ಆರಂಭಿಸಿದ. ಯಜ್ಞದ ಸಂದರ್ಭದಲ್ಲಿ ಅನೇಕ ಹಸುಗಳನ್ನು ದಾನವಾಗಿ ನೀಡಿದ. ಆ ಹಸುಗಳು ಹೇಗಿದ್ದವೆಂಬುದನ್ನು ತಂದೆಯ ಪಕ್ಕದಲ್ಲಿಯೇ ಕುಳಿತಿದ್ದ ರಾಜಕುಮಾರ ನಚಿಕೇತನು ವಿಮರ್ಶಾಬುದ್ಧಿಯಿಂದ ಗಮನಿಸಿದ:

**ಪೀತೋದಕಾ ಜಗ್ಧತೃಣಾ ದುಗ್ಧದೋಹಾ ನಿರಿಂದ್ರಿಯಾಃ ।**
**ಅನಂದಾ ನಾಮ ತೇ ಲೋಕಾಸ್ತಾನ್ ಸ ಗಚ್ಛತಿ ತಾ ದದತ್ ॥**

ನೀರನ್ನು ಕುಡಿಯಲೂ ಶಕ್ತಿಯಿಲ್ಲದ, ಹುಲ್ಲನ್ನು ತಿನ್ನಲೂ ನಿಶ್ಶಕ್ತವಾದ, ಹಾಲು ಕೊಡಲು ಅಸಮರ್ಥವಾದ ತೀರಾ ಬಡಕಲು ದೇಹದ ಈ ಹಸುಗಳನ್ನು ದಾನವಾಗಿ ಕೊಟ್ಟು ಯಾವ ಸ್ವರ್ಗಕ್ಕೆ ಹೋಗುತ್ತೀಯಾ? ಎಂದು ರಾಜಕುಮಾರ ನಚಿಕೇತನು ತಂದೆಯನ್ನು ಮೂದಲಿಸಿದ. ದಾನ-ಧರ್ಮಗಳನ್ನು ಮಾಡುವುದರಿಂದ ಪುಣ್ಯ ಬರುತ್ತದೆ, ಆ ಮೂಲಕ ಸತ್ತ ಮೇಲೆ ಸ್ವರ್ಗ ಸಿಕ್ಕುತ್ತದೆಯೆಂದು ಕಾಣದ ಸ್ವರ್ಗಕ್ಕಾಗಿ ಹಾತೊರೆಯುವುದಕ್ಕಿಂತ, ಬದುಕಿದ್ದಾಗಲೇ ದೀನ ದುರ್ಬಲರ ಕಷ್ಟದಲ್ಲಿ ಭಾಗಿಯಾಗಿ, ಅವರ ಕಣ್ಣೆವೆಯಲ್ಲಿ ಮೂಡಿ ಬರುವ ಕೃತಜ್ಞತೆಯ ಭಾವದಲ್ಲಿ ಸ್ವರ್ಗಸುಖವನ್ನು ಕಾಣುವುದು ಒಳ್ಳೆಯದು. ಹಿಂದಿನ ರಾತ್ರಿ ಉಳಿದ ತಂಗಳನ್ನವನ್ನು ನೀಡಿದರೂ ಭಿಕ್ಷುಕನು ದೈನ್ಯತೆಯಿಂದ ಸ್ವೀಕರಿಸಿ 'ನಿನಗೆ ಪುಣ್ಯ ಬರಲಿ ತಾಯಿ' ಎಂದು ಹಾರೈಸುತ್ತಾನೆ. ಆದರೆ ತಿಪ್ಪೆಗೆ ಎಸೆಯಬೇಕಾಗಿದ್ದ ಹಳಸಿದ ಅನ್ನವನ್ನು ನೀಡಿ ತನಗೆ ಯಾವ ಪುಣ್ಯ ಬರಲು ಸಾಧ್ಯ ಎಂಬುದನ್ನು ನೀಡುವವರು ವಿಚಾರ ಮಾಡಿ ಲಜ್ಜೆ ಪಟ್ಟುಕೊಳ್ಳಬೇಕು.

ದಾನವು ಮನ ಕರಗಿ ಮಾಡಬೇಕಾದ ಮಾನವೀಯ ಸ್ಪಂದನ. ಒತ್ತಾಯದಿಂದ ಹೇಳಿಸಿಕೊಂಡು ಕೇಳಿಸಿಕೊಂಡು ಒಲ್ಲದ ಮನಸ್ಸಿನಿಂದ ಮಾಡುವ ಕಾರ್ಯವಲ್ಲ. ಅದರಲ್ಲಿ ಕಡ್ಡಾಯವಿರಕೂಡದು, ಅಸಡ್ಡೆಯೂ ಇರಕೂಡದು. ಬೇಡಲಾಗದು ಜಂಗಮ; ಬೇಡಿಸಿಕೊಳ್ಳಲಾಗದು ಭಕ್ತ ! ಜಂಗಮನಾದವನು ಕೇಳಬಾರದು, ಭಕ್ತನಾದವನು ಕೇಳಿಸಿಕೊಳ್ಳಬಾರದು. ಜಂಗಮನು ಕೇಳದೆ ಪಡೆಯಬೇಕು; ಭಕ್ತನಾದವನು ಕೇಳಿಸಿಕೊಳ್ಳದೆ ನೀಡಬೇಕು. ಇಬ್ಬರೂ ಹೊಣೆಯರಿತು ನಡೆಯಬೇಕು. ಇಲ್ಲಿ ಜಂಗಮ ಎಂದರೆ ಸಮಷ್ಟಿಯಾದ ಸಮಾಜ. ಭಕ್ತ ಎಂದರೆ ವ್ಯಷ್ಟಿಯಾದ ವ್ಯಕ್ತಿ ಎಂಬ ವಿಶಾಲಾರ್ಥದಲ್ಲಿ ಗ್ರಹಿಸಬೇಕು. ಇಂದಿನ ನವ ನಾಗರೀಕತೆಯಲ್ಲಿ ಕೇಳದೇ ಹೋದರೆ ಯಾರೂ ಕೊಡುವುದಿಲ್ಲ; ಕೊಡದೇ ಇದ್ದರೆ ಯಾರೂ ಕಾಡುವುದನ್ನು ಬಿಡುವುದಿಲ್ಲ. ಹೀಗಾಗಿ ದಾನವು ದಾನವಾಗಿ ಉಳಿಯದೆ ವಾಗ್ದಾನವಾಗಿದೆ, ವಾಗ್ದಾನವು ವಾಗ್ದಾನವಾಗಿಯೇ ಉಳಿದು ಬಾಕಿ ಪಟ್ಟಿಯಾಗಿದೆ, ಬಾಕಿ ಪಟ್ಟಿಯು ಸಾಲದ ಪಟ್ಟಿಯಾಗಿ ವಸೂಲಿ-ಬಾಜಿಯಾಗಿದೆ. ಹೆಚ್ಚಿಗೆ ಪೀಡಿಸಿದರೆ 'ಅದೇನೂ ಕೊಟ್ಟ ಸಾಲವಲ್ಲ ಹೋಗಿ' ಎಂದು ಜೋರು ಮಾಡಿ ಹೀಗಳೆವಂತಾಗಿದೆ. ಅಂತಃಕರಣ, ಮರುಕ ಹೋಗಿ ಕೋಪ ತಾಪಗಳಿಗೆ ಎಡೆಯಾಗಿದೆ.

**ಮಾನವರ ದುರ್ಗುಣವನೇನೆಂದು ಬಣ್ಣಿಸಲಿ**
**ದಾನಗೈ ಎನಲು ಕನಲುವರು, ದಂಡವ**
**ಮೌನದಿಂದೀಯುವರು ಸರ್ವಜ್ಞ !"**

ಜನರು ದಂಡವನ್ನು ಸುಲಭವಾಗಿ ಕೊಟ್ಟಂತೆ ದಾನವನ್ನು ಕೊಡುವುದಿಲ್ಲವೆನ್ನುತ್ತಾನೆ ಸರ್ವಜ್ಞ. ಇಂದಿನ ರಾಜಕಾರಣಿಗಳು ಸರ್ವಜ್ಞನಿಗೆ ಗೊತ್ತಿದ್ದರೆ, ಚುನಾವಣೆಯಲ್ಲಿ ಕೊಟ್ಟಂತೆ ಗೆದ್ದ ಮೇಲೆ ಕೊಡುವುದಿಲ್ಲವೆಂದು ಹೇಳುತ್ತಿದ್ದನೋ ಏನೋ!

ಅನೇಕ ಬಡವರಿಗೆ ದುಡ್ಡಿನ ಬಡತನವಿರುತ್ತದೆಯೇ ಹೊರತು ಮನಸ್ಸಿನ ಬಡತನವಿರುವುದಿಲ್ಲ. 'ಮನೆ ನೋಡಾ ಬಡವರು, ಮನ ಘನ ಸಂಪನ್ನರು' ಎನ್ನುತ್ತಾರೆ ಬಸವಣ್ಣನವರು. ಕೆಲವರಿಗೆ ಏನೆಲ್ಲ ಇದ್ದರೂ ದಾನವನ್ನು ಮಾಡಲು ಮನಸ್ಸೇ ಬರುವುದಿಲ್ಲ. ಏನಾದರೂ ಕೇಳಿದರೆ ಏನೂ ಇಲ್ಲದ ಬಡವರಂತೆ ವರ್ತಿಸುತ್ತಾರೆ. ಉಣ್ಣುವಾಗ ಹಸಿದವರಿಗೆ ಒಂದು ತುತ್ತು ಅನ್ನ ನೀಡದ, ಉಡುವಾಗ ಬಡವರಿಗೆ ಒಂದು ಚಿಂದಿ ಬಟ್ಟೆ ಕೊಡದ ಕಡುಲೋಭಿ ಹಾಸಿಗೆ ಹಿಡಿದು ಸಾಯುವ ಸ್ಥಿತಿಯಲ್ಲಿರುವಾಗ ದೇವಸ್ಥಾನಕ್ಕೆ ತನ್ನನ್ನು ಎತ್ತಿಕೊಂಡು ಹೋಗಿ ದೇವರ ದರ್ಶನ ಮಾಡಿಸಿ, ಪ್ರಸಾದ ಕೊಡಿಸಿರಿ ಎಂದು ಗೋಗರೆಯುತ್ತಾನೆ. ಅಂಥವರನ್ನು ಕಂಡು 'ದೇವರಿಗೆ ಅವನ ಹೆಣವೇನಾದರೂ ಬಿಟ್ಟಿ ಹೇಳಿದೆಯೇ?' ಎಂದು ಮಾರ್ಮಿಕವಾಗಿ ಕೇಳುತ್ತಾರೆ ಬಸವಣ್ಣನವರು:

ಉಂಬಾಗಳಿಲ್ಲೆನ್ನ, ಉಡುವಾಗಳಿಲ್ಲೆನ್ನ
ಸಾವಾಗ ದೇಹವ ದೇಗುಲಕೆ ಒಯ್ಯೆಂಬ....
ದೇವರಿಗೆ ಹೆಣ ಬಿಟ್ಟ ಹೇಳಿತ್ತೇ ಕೂಡಲಸಂಗಮ ದೇವಾ? (ವಚನ 222)

30.7.2008

ಶ್ರೀ ತರಳಬಾಳು ಜಗದ್ಗುರು
ಡಾ॥ ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳವರು
ಸಿರಿಗೆರೆ

❑